**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>**

**<u>ಹಿರೇಕೆರೂರು.</u>**

<u>ಓ.ಎಸ್. ನಂಬರಃ **299/2014**</u>

ಪಿ. ಡಬ್ಲ್ಯೂ-2

ದಿನಾಂಕಃ 01.09.2023 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

| | | |
|---|---|---|
| ವಾಗ್ಮೂಲದವರ ಹೆಸರು | : | ಶಿವಾನಂದ ಕುಲಕರ್ಣಿ |
| ತಂದೆಯ ಹೆಸರು | : | ಗಣಪತಿರಾವ್ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಸಾಯ ಮತ್ತು ಬಾಂಡ್ ರೈಟರ್ |
| ವಾಸ ಸ್ಥಳ | : | ಹಿರೇಕೆರೂರ. |

<u>ಸಾಕ್ಷಿ ವಿಚಾರಣೆಃ</u> ವಾದಿಯರ ಪರ ಶ್ರೀ. ಜಿ.ವಿ.ಕೆ. ವಕೀಲರಿಂದ

1. ನಾನು ಸುಮಾರು 29-30 ವವರ್ಷಗಳಿಂದ ಬಾಂಡ್ ರೈಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನೀವು ದಸ್ತಾವೇಜುಗಳನ್ನು ಬರೆಯಲು ಯಾವುದಾದರೂ ವಿಷೇಶ ತರಬೇತಿ ಪಡೆದುಕೊಂಡಿದ್ದೀರಾ ಎಂದು ಸಾಕ್ಷಿಯು ಹೌದು, 1993 ರಲ್ಲಿ ಪರೀಕ್ಷೆಯನ್ನು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಪರೀಕ್ಷೆ ಎಂದರೆ ದಸ್ತು ಬರಹಗಾರರಿಗೆ ಪರವಾನಿಗೆಗಾಗಿ ಇರುವ ಪರೀಕ್ಷೆ. ಸದರಿ ಪರೀಕ್ಷೆ ಬರೆಯುವುದರಿಂದ ವಿಶೇಷ ಜ್ಞಾನ ಸಿಗುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ತಂದೆಯೂ ಕೂಡ ದಸ್ತಾವೇಜು ಬರಹಗಾರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ವಾದಿ ಪರ ವಕೀಲರು ಸಾಕ್ಷಿಗೆ ನಿಪಿ-3 ನ್ನು ತೋರಿಸಿ ಅದರಲ್ಲಿ ವಾದಿಯ ಮಾಲೀಕರು ಎಂದರೆ ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಯು ಲಾವಣಿ ಪತ್ರ ಬರೆಸಲು ಬಂದಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಖರೀದಿ ಪತ್ರ ಬರೆಯಲು ಮಾಹಿತಿ ಕೊಟ್ಟಿದ್ದರಿಂದ ಖರೀದಿ ಪತ್ರ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-3 ನ್ನು ಬರೆಯುವ ಕಾಲಕ್ಕೆ ವಾದಿಗೆ ವಯಸ್ಸಾಗಿತ್ತು ಎಂದರೆ ನನಗೆ ನೆನಪಿಲ್ಲ.

3. ವಾದಿಯು ನಾನು ಲಾವಣಿ ಪತ್ರ ಬರೆಸಲು ಹೋಗಿದ್ದೆ ಎಂದು ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸಾಕ್ಷಿಯು ಆ ದಿನ ಅವರು ಕರಡು ಪ್ರತಿ ತೆಗೆದುಕೊಂಡು ಬಂದು ನನಗೆ ಮಾಹಿತಿ ನೀಡಿದ್ದರಿಂದ ನಾನು ಖರೀದಿ ಪತ್ರ ಬರೆದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಎಲ್ಲ ಸಂದರ್ಭಗಳಲ್ಲಿ ಕರಡು ತಯಾರಿಸುವುದಿಲ್ಲ, ಕೆಲವೊಂದರಲ್ಲಿ ಅವರ ಮಾಹಿತಿ ಆಧಾರದ ಮೇಲೆ ಕರಡು ತಯಾರಿಸುತ್ತೇನೆ. ಕರಡು ಪ್ರತಿಗಳಿಗೆ ಯಾವುದೇ ರೆಜಿಸ್ಟರ್ ಇರುವುದಿಲ್ಲ. ನೀವು ಪ್ರತಿಯೊಂದು ಕರಡನ್ನು ರೆಜಿಸ್ಟರ್‌ನಲ್ಲಿ ನಮೂದು ಮಾಡಿ ಇಟ್ಟು, ಕೆಲವು ಸಂದರ್ಭಗಳಲ್ಲಿ ಸಾಕ್ಷ್ಯಕ್ಕಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎಂದರೆ ಸಾಕ್ಷಿಯು ನಮಗೆ ಮೇಲಾಧಿಕಾರಿಗಳಿಂದ ಆ ಬಗ್ಗೆ ಯಾವುದೇ ಸೂಚನೆ ಇಲ್ಲ ಎಂದು ನುಡಿಯುತ್ತಾರೆ.

4. ಕರಡು ಹಾಗೂ ಮೂಲ ದಸ್ತಾವೇಜುಗಳಲ್ಲಿ ವ್ಯತ್ಯಾಸ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಮೂಲ ದಸ್ತಾವೇಜುಗಳಲ್ಲಿ ತಿದ್ದುಪಡಿ ಇದ್ದಾಗ ಅಲ್ಲಿ ಷರಾ ಹಾಕಿ ಚಿಕ್ಕ ಸಹಿ ಮಾಡಿರುತ್ತೇವೆ ಎಂದರೆ ಸರಿ. ಈಗಿನ ಗಣಕಯಂತ್ರ ಯುಗದಲ್ಲಿ ಸಾಮಾನ್ಯವಾಗಿ ಸಿಗುವ ದಸ್ತಾವೇಜುಗಳನ್ನು ತೆಗೆದುಕೊಂಡು ನಕಲು ಮಾಡಲು ಸಾಧ್ಯತೆ ಇದೆ ಎಂದರೆ ಸರಿ. ನಿಪಿ-3 ರಲ್ಲಿರುವ ವಾದಿಯ ಹೆಬ್ಬೆಟ್ಟಿನ ಗುರುತುಗಳಿಗೆ ಬೇರೆ ಯಾರದೂ ದೃಢೀಕರಣ ಸಹಿ ಇಲ್ಲ ಎಂದರೆ ಸರಿ. ನಿಪಿ-3 ರ ಕಾಲಕ್ಕೆ ಕರಡನ್ನು ಯಾರು ತಂದು ಕೊಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ. ಕರಡು ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾವು ಕರಡು ಪ್ರತಿಗಳನ್ನು ಇಟ್ಟುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

5. ಕರಡು ಪ್ರತಿ ಹಾಗೂ ಮೂಲ ದಸ್ತಾವೇಜುನಲ್ಲಿ ಬರೆದ ವಿಷಯಗಳಲ್ಲಿ ಸಂಪೂರ್ಣ ವ್ಯತ್ಯಾಸ ಇರುತ್ತದೆ ಎಂದರೆ ಸುಳ್ಳು. ಕರಡು ಪ್ರತಿಯಲ್ಲಿ ಹಾಗೂ ನಿಪಿ-3 ರಲ್ಲಿ ಬರೆದಿರುವ ವಿಷಯಗಳು ಬೇರೆ ಬೇರೆ ಎಂದರೆ ಸುಳ್ಳು. ನಿಪಿ-3 ರಲ್ಲಿ ಕರಡಿನ ಪ್ರಕಾರ ದಸ್ತಾವೇಜನ್ನು ಬರೆದಿರುತ್ತೇನೆ ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ನಾನು ಉಪನೊಂದಣಿ ಕಛೇರಿಗೆ ಹೋಗುವುದಿಲ್ಲ. ಸಾಕ್ಷಿಯು ಮುಂದುವರೆದು ಅವರು ಯಾವುದಾದರೂ ವಿಷಯಕ್ಕೆ ಸಂಬಂಧಿಸಿದಂತೆ ಕರೆಸಿದಾಗ ಮಾತ್ರ ಹೋಗುತ್ತೇನೆ ಎಂದು ನುಡಿಯುತ್ತಾರೆ.

6. ಖರೀದಿ ಪತ್ರ ಹಾಗೂ ಖರೀದಿ ಕರಾರು ಪತ್ರ ಬೇರೆ ಬೇರೆ ಎಂದರೆ ಸರಿ . ಪ್ರತಿವಾದಿವಾದಿಯರು ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತೇವೆ ಎಂದು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರ ಕಾಲಕ್ಕೆ ಪಕ್ಷಗಾರರು ಖರೀದಿ ಕರಾರು ಪತ್ರ ಆಗಿರುವ ಬಗ್ಗೆ ನನಗೆ ಹೇಳಿದರು. ನಾನು ನ್ಯಾಯಾಲಯಕ್ಕೆ ಸಾಕ್ಷಿಯಾಗಿ ಬರುವಾಗ ದಾವಾದ ವಿಷಯಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ. ನೀವು ಪ್ರತಿವಾದಿಯರೊಂದಿಗೆ ಮಿಲಾಫೆಯಾಗಿ ಲಾವಣಿ ಪತ್ರ ಬರೆಯುವ ಬದಲಾಗಿ ಖರೀದಿ ಪತ್ರ ಬರೆದಿರುತ್ತೀರಿ ಎಂದರೆ ಸುಳ್ಳು. ನಿಪಿ-3 ನ್ನು ನಮ್ಮ ಕಛೇರಿಯಲ್ಲಿ ಬರೆದಿದ್ದು, ಸಮಯ ನನಗೆ ನೆನಪಿಲ್ಲ.

<u>ಸಾಕ್ಷಿ ವಿಚಾರಣೆಃ</u> ಪ್ರತಿವಾದಿ ಪರ ಶ್ರೀ. ಎ.ಎ.ಇ. ವಕೀಲರಿಂದ

1. ಸಾಮಾನ್ಯವಾಗಿ ಮಾರಾಟಕ್ಕೆ ಕೊಡುವವರನ್ನು ಮೊದಲು ವಿಚಾರಿಸುತ್ತೇವೆ ಎಂದರೆ ಸಾಕ್ಷಿಯು ಅವರು ಬಂದಿದ್ದಾಗ ಮಾತ್ರ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಖರೀದಿ ಪತ್ರ ಬರೆದಾಗ ಮಾರಾಟಕ್ಕೆ ಕೊಡುವವರಿಗೆ ಮೊದಲು ಓದಿ ತಿಳಿಸುತ್ತೇವೆ ಎಂದರೆ ಸರಿ. ಮಾರಾಟಕ್ಕೆ ಕೊಡುವವರಿಗೆ ಒದಿ, ತಿಳಿಸಿ ಅವರು ಒಪ್ಪಿಕೊಂಡ ನಂತರ ಸಹಿ ಮಾಡಿಸುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ಸಾಕ್ಷಿದಾರರಿಗೆ ಪತ್ರ ಓದಿ ತಿಳಿಸುತ್ತೇವೆ ಎದರೆ ಸಾಕ್ಷಿಯು ಎಲ್ಲರೂ ಇದ್ದಾಗ ಅವರಿಗೆ ಓದಿ ಹೇಳುತ್ತೇವೆ ಇಲ್ಲದಿದ್ದರೆ ಅವರಿಗೆ ಓದಲು ಕೊಡುತ್ತೇವೆ ಎಂದು ನುಡಿಯುತ್ತಾರೆ ಸಾಮಾನ್ಯವಾಗಿ ಅನಕ್ಷರಸ್ಥರು ಇದ್ದಾಗ ಅವರಿಗೆ ನಾವೇ ಓದಿ ಹೇಳಿ ತಿಳಿಸುತ್ತೇವೆ. ಎಂದರೆ ಸರಿ.

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.